ಪ್ರಜಾವಾಣಿ

# ಅಂಗವಿಕಲನ ಬಾಳಿಗೆ ಬೆಳಕಾದ 'ಸೆಲ್ಕೊ'

## ಸೂರ್ಯನಿಂದ ಬೆಳಗುತ್ತಿದೆ ಮಣ್ಣಿನ ಉದ್ಯಮ; ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಅನುಕೂಲ

• ಸ್ಪಂದನ್ ಸಿಂಹ ಜೆ.ವಿ





ಮಾರಾಟಕ್ಕೆ ಸಿದ್ಧವಾಗಿರುವ ಮಡಿಕೆಗಳು (ಎಡಚಿತ್ರ) ಸೌರಯಂತ್ರ ದಿಂದ ಸಿದ್ಧವಾಗುತ್ತಿರುವ ಮಡಿಕೆ

**ಜಾವಗಲ್:** ಭಾರತದ ಮಣ್ಣಿನಲ್ಲಿ ಮಿಳಿತವಾದ ಹೆಮ್ಮೆಯ ಮಣ್ಣಿನ ಉದ್ಯಮವಾದ ಕುಂಬಾರಿಕೆಯನ್ನು ಸೌರ ಚಾಲಿತ ಉಪಕರಣಗಳ ಮೂಲಕ ಪುನಶ್ಚೇತನಗೊಳಿಸಲು ಗ್ರಾಮ ಪಂಚಾಯಿತಿ ಹಾಗು ಸೆಲ್ಕೊ ಸಂಸ್ಥೆಯೊಂದಿಗೆ ಆದ್ಯತೆ ನೀಡಿದ ಕಾರಣದಿಂದ, ಅಂಗವಿಕಲನ ಬಾಳಿನ ಬೆಳಕಾಗಿದೆ.

ಸಮೀಪದ ಬಂದೂರು ಗ್ರಾಮದ ರಾಜಪ್ಪಶೆಟ್ಟಿ ಅವರು ಸೆಲ್ಕೊ ಸೋಲಾರ್ ಕಂಪನಿ ನೆರವಿನಿಂದ ಸ್ವಾವಲಂಬಿ ಬದುಕು ಕಟ್ಟಿಕೊಂಡಿದ್ದಾರೆ.

**ಕತ್ತಲ ಬಾಳಲ್ಲಿ ಸೆಲ್ಕೊ ಬೆಳಕು:** ಮೂರು ವರ್ಷಗಳ ಹಿಂದೆ ಕಾರ್ಯ ನಿಮಿತ್ತ ತುಮಕೂರಿಗೆ ತೆರಳಿದ್ದ ರಾಜಪ್ಪಶೆಟ್ಟಿ ಬಸ್‌ನಿಂದ ಕೆಳಗಿಳಿಯುವವೇಳೆ ಬೈಕ್ ಅಪಘಾತಕ್ಕೀಡಾದವರು. ಪ್ರಜ್ಞೆ ತಪ್ಪಿ ಕೆಳಗೆ ಬಿದ್ದಿದ್ದ ರಾಜಪ್ಪ ಅವರನ್ನು ಪೊಲೀಸರು ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆ ಕೊಡಿಸಿದ್ದರು. ನಂತರ ಬೆಂಗಳೂರು ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾಗಿ ಪ್ರಾಣಾಪಾಯದಿಂದ ಪಾರಾದರೂ ಕೂಡ, ಮೊದಲಿನಂತೆ ಓಡಾಡಲು ಸಾಧ್ಯವಾಗಲಿಲ್ಲ. ಐದಾರು ತಿಂಗಳು ಮನೆಯಲ್ಲೇ ಕುಳಿತ ರಾಜಪ್ಪ ಕೂತ ಜಾಗದಲ್ಲೇ ಏನಾದರೂ ಮಾಡಬೇಕೆಂದು ಯೋಚಿಸಿದಾಗ ಕುಲಕಸುಬು ಮಡಿಕೆ ತಯಾರಿಸುವ ನಿರ್ಧಾರ ಮಾಡಿದರು. ತಕ್ಷಣವೇ ಗ್ರಾಮ ಪಂಚಾಯಿತಿ ಹಾಗು ಸೆಲ್ಕೋ ಸೋಲಾರ್ ನೆರವಿನೊಂದಿಗೆ ಸೌರಚಾಲಿತ ಯಂತ್ರ ಪಡೆದು ಜೀವನ ಸಾಗಿಸುತ್ತಿದ್ದಾರೆ.

**ಸಂಕಷ್ಟಗಳ ಸರಮಾಲೆ:** ಅವಿವಾಹಿತರಾಗಿರುವ ರಾಜಪ್ಪಶೆಟ್ಟಿ ಜೀವನದುದ್ದಕ್ಕೂ ಸಂಕಷ್ಟಗಳನ್ನೇ ಎದುರಿಸಿದ್ದಾರೆ. ವೃದ್ಧ ತಂದೆ ತಾಯಿಯನ್ನು ಸಲಹುವ ಜವಾಬ್ದಾರಿ ಹೊತ್ತಿದ್ದ ಅವರಿಗೆ ಅಪಘಾತ ಶಾಪವಾಗಿ ಪರಿಣಮಿಸಿದೆ. ಕೆಲ ವರ್ಷದ ಹಿಂದೆ ತಮ್ಮನನ್ನು ಕಳೆದುಕೊಂಡು ಆತನ ಪುತ್ರನ ಜವಾಬ್ದಾರಿ ವಹಿಸಿಕೊಂಡಿದ್ದಾರೆ. ಅಷ್ಟರಲ್ಲೇ ಅವರಿಗೂ ಅಪಘಾತವಾಯಿತು. ಈಗ ಮಡಿಕೆ ತಯಾರಿಸುವ ಕಾರ್ಯದಲ್ಲಿ ತಮ್ಮನ ಪುತ್ರನೂ ನೆರವಾಗುತ್ತಾನೆ.

ದುಡಿಮೆಯನ್ನೇ ನಂಬಿರುವ ಕುಟುಂಬಕ್ಕೆ ರಾಜಪ್ಪ ಅವರೇ ಆಧಾರ. ದಿನಕ್ಕೆ 50ಮಡಿಕೆಯನ್ನು ತಯಾರಿಸುತ್ತಿದ್ದು, ಪಕ್ಕದ ಹಳ್ಳಿಗಳ ಜನರು ಖರೀದಿಸುತ್ತಿದ್ದಾರೆ. ದೊಡ್ಡ ಮಡಿಕೆ ₹15, ಹಾಗು ಸಣ್ಣ ಮಡಿಕೆಗೆ ₹10 ಮಾರಾಟವಾಗುತ್ತಿದೆ.

**ಕೆಲಸ ಸರಾಗ:** ಸೆಲ್ಕೊ ಸಂಸ್ಥೆಯ ತಯಾರಿಸಿರುವ ಸೌರ ಚಾಲಿತ ಕುಂಬಾರಿಕೆ ಚಕ್ರ (ಪಾಟರಿ ವ್ಹೀಲ್) ಮೋಟಾರ್ ಹಾಗೂ ಬಳಕೆಗನುಗುಣವಾಗಿ ವೇಗ ನಿಯಂತ್ರಕವನ್ನು ಹೊಂದಿದ್ದು, ಇದರಿಂದ ದೈಹಿಕ ಶ್ರಮದ ಉಳಿತಾಯ ಸಾಧ್ಯವಾಗುತ್ತದೆ. ಉತ್ಪಾದಕತೆ ಹೆಚ್ಚಳವಾಗಿ ಕುಂಬಾರರ ಆದಾಯ ವೃದ್ಧಿಯಾಗುತ್ತಿದೆ ಎಂದು ಸೆಲ್ಕೊ ಸಂಸ್ಥೆಯ ಹಿರಿಯ ಪ್ರಬಂಧಕ ಬಿ.ಪ್ರಸಾದ್ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

**ಕೆಲಸ ಹೇಗೆ ಮಾಡುತ್ತದೆ:** ಜೇಡಿ ಮಣ್ಣನ್ನು ತಂದು ಪರಿಷ್ಕರಿಸಿ ಕೊಳೆಸಿ ಹದ ಮಾಡುವುದು ಕುಂಬಾರಿಕೆಯ ಬಹು ಮುಖ್ಯ ಹಂತ. ಇದನ್ನು ಕೈಯಿಂದಲೇ ಮಾಡಲಾಗುತ್ತಿತ್ತು, ನಾಲ್ಕು ದಿನ ಮುಂಚಿತವಾಗಿ ಮಣ್ಣನ್ನು ಕಲಸಿ ಹದ ಮಾಡಬೇಕಾಗಿತ್ತು.

ಬ್ಲಂಗರ್ ಯಂತ್ರಕ್ಕೆ ನೀರು ತುಂಬಿದ ಟ್ಯಾಂಕಿನಲ್ಲಿ ಜೇಡಿಮಣ್ಣನ್ನು ಸುರಿದು ಈ ಯಂತ್ರ ಆಳವಡಿಸಿದರೆ ಮುಗಿಯಿತು. ಅದು ಎಲ್ಲವನ್ನೂ ಮಿಶ್ರ ಮಾಡಿ ಮಡಿಕೆ ಮಾಡಲು ಬೇಕಾದ ಹದಮಣ್ಣನ್ನು ಸಿದ್ಧಪಡಿಸುತ್ತದೆ. ಸೌರ ಚಾಲಿತ ಡಿ.ಸಿ.ಚಕ್ರದಿಂದಾಗಿ ಒಂದು ಮಡಿಕೆ ತಯಾರಿಸುವ ಸಮಯ 15 ನಿಮಿಷದಿಂದ 5 ನಿಮಿಷಕ್ಕೆ ಇಳಿದಿದೆ. ಉತ್ಪಾದಕತೆಯು ಶೇ33ರಷ್ಟು ಹೆಚ್ಚಾಗಿದೆ. ಹಿಂದೆ ಕೊಡಬೇಕಾಗಿದ್ದ ರೂ 200-300 ವಿದ್ಯುತ್ ಬಿಲ್ಲು ಇಂದು ಪೂರ್ಣವಾಗಿ ಉಳಿತಾಯವಾಗಿದೆ. ನಿರ್ವಹಣಾ ಕೌಶಲ್ಯದಲ್ಲಿ ಶೇಕಡಾ 20ರಷ್ಟು ಹೆಚ್ಚಳ ಕಂಡು ಬಂದಿದೆ.

### ಮುಖ್ಯಾಂಶಗಳು

- ಅಂಗವಿಕಲನಿಗೆ ನೆರವಾದ ಸೋಲಾರ್ ಯಂತ್ರ
- ಕಡಿಮೆ ಬಂಡವಾಳ ಹೆಚ್ಚು ಆದಾಯ
- ನಿರುದ್ಯೋಗಿ ಯುವಕರನ್ನು ಕೈ ಬೀಸಿ ಕರೆಯುತ್ತಿದೆ ಈ ಉದ್ಯಮ

**ಎರಡೂ ಕಾಲು ಸ್ವಾಧೀನ ಕಳೆದುಕೊಂಡಿರುವ ನನಗೆ ಮನೆಯಿಂದ ಹೊರಹೋಗುವುದು ಅಸಾಧ್ಯ. ಆದ್ದರಿಂದ ಅಂಗವಿಕಲರ ಕಲ್ಯಾಣ ಇಲಾಖೆ ಮೂರು ಚಕ್ರದ ವಾಹನ ಕೊಟ್ಟರೆ ಅನುಕೂಲವಾಗುತ್ತದೆ**

**ರಾಜಪ್ಪಶೆಟ್ಟಿ,** ಕುಂಬಾರ

**ಜನರು ಆನ್‌ಲೈನ್‌ನಲ್ಲಿ ಹಣತೆಗಳನ್ನು, ಮಣ್ಣಿನ ಪದಾರ್ಥಗಳನ್ನು ಕೊಳ್ಳುತ್ತಿದ್ದು, ಇದರ ಬದಲು ಇಂತಹ ಆರ್ಥಿಕವಾಗಿ ಹಿಂದುಳಿದ ಕುಂಬಾರರ ಹತ್ತಿರ ಕೊಂಡರೇ ಅನುಕೂಲವಾಗುತ್ತದೆ**

**ಬಂದೂರು ಮಹೇಶ್,** ಸ್ಥಳೀಯ

**ನಿರುದ್ಯೋಗಿ ಯುವಕರು ಇಂತಹ ಯಂತ್ರಗಳನ್ನು ಪಡೆದು ಸ್ವ ಉದ್ಯೋಗ ಆರಂಭಿಸಿ ಬೇರೆಯವರಿಗೂ ಕೆಲಸ ಕೊಡಬೇಕು**

**ಬಂದೂರು ಗಣೇಶ್,** ಸ್ಥಳೀಯ